ನಿರುದ್ಯೋಗಿ ಯುವಕರಿಗೆ ವಾಹನ ಮಂಜೂರಾತಿ

651 (712) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ನಿರುದ್ಯೋಗಿ ಯೋಜನೆ ಅಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಯಾವ ಯಾವ ರೀತಿಯ ವಾಹನಗಳನ್ನು ವಿತರಿಸಲಾಗಿದೆ ,

(ಆ) ಈ ಯೋಜನೆ ಜಾರಿಗೆ ತರಲು ಇರುವ ಮಾನದಂಡಗಳೇನು ,

(ಇ) ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 2003 ರಿಂದ 2007ರವರೆಗ ಎಷ್ಟು ಫಲಾನುಭವಿಗಳಿಗೆ ಹಂಚಿಕಗೆ ಮಾಡಲಾಗಿದೆ ,

(ಈ) ಈ ಯೋಜನೆಯ ಅಡಿಯಲ್ಲಿ ಇಲಾಖೆಯ ಮರ್ಜಿಗೆ ತೇಕಡ 20 ರಷ್ಟು ಇರುವುದರಲ್ಲಿ ಎಷ್ಟು ಜನರಿಗೆ ಯಾವ ರೀತಿಯ ನಿಯಮಗಳಲ್ಲಿ ಹಂಚಿಕೆ ಮಾಡಲಾಗಿದೆ (ಫಲಾನುಭವಿಗಳ ವಿವರ ಒದಗಿಸುವುದು) ?

ಶ್ರೀ ಬಾಲಚಂದ್ರ ಲ ಜಾರಕಿಹೋಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸ್ವಯಂ ಉದ್ಯೋಗ ಯೋಜನೆ ಹಾಗೂ ಉದ್ಯಮ ಶೀಲತಾ ಯೋಜನೆಯಡಿ ಹಾಗೂ ಕೇಂದ್ರ ಸರ್ಕಾರದ ನಿಗಮಗಳಿಂದ ನೇರ ಸಾಲ ಯೋಜನೆ ಹಾಗೂ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಗಳನ್ವಯ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಜನರಿಗ ಈ ಕೆಳಕಂಡಂತೆ ವಿವಿಧ ರೀತಿಯ ವಾಹನಗಳನ್ನು ವಿತರಿಸಲಾಗಿದೆ

ವಾಹನಗಳ ಮಾದರಿ	2003–04		2004–05		2005–06		2006–07	
	ಪ ಜಾ	ಪ ವ	ಪ ಜಾ	ಪ ವ	ಪ ಜಾ	ಪ ವ	ಪ ಜಾ	ಪ ವ
ಟ್ರ್ಯಾಕ್ಟರ್ ಟ್ರೈಲರ್	60	26	78	38	115	53	114	50
ಟಾಟಾ ಸುಮೋ	32	09	31	07	38	13	21	02
ಟೆಂಪೋ ಟ್ರಾವಲರ್	11	–	02	–	01	–	01	01
ಅಟೋ ರಿಕ್ಷಾ	419	41	409	59	833	69	357	57
ಟಾಟಾ ಇಂಡಿಕಾ	02	–	13	07	47	07	68	17
ಮಿನಿ ಲಾರಿ	01	–	01	01	02	–	01	–
ಟಾಟಾ 407	03	02	05	–	02	–	02	02

ಮಹೇಂದ್ರ ವ್ಯಾನ್	04	01	03	–	06	–	01	–
ಟೆಂಪೋ ಟ್ರ್ಯಾಕ್ಸ್	18	06	11	07	20	05	21	10
ಟೆಂಪೋ XL	16	01	14	–	02	–	01	01
ಮಹೇಂದ್ರ ಗೂಡ್ಸ್	04	03	01	–	12	02	01	–
ಮಾರುತಿ ವ್ಯಾನ್	08	–	18	01	04	01	06	02
ಅಂಬಾಸಿಡರ್ ಕಾರ್	02	–	02	–	02	03	03	01
ಐಶರ್ ಕ್ಯಾಂಟರ್	–	–	–	–	01	01	–	–
ಟೋಯೋಟಾ ಕ್ವಾಲೀಸ್	01	–	20	01	01	–	01	–
ಟಾಟಾ ಸಫಾರಿ	01	–	-	–	–	–	–	–
ಟಾಟಾ ಐಕಾನ್	–	–	01	–	01	–	04	01
ಒಟ್ಟು	582	89	609	121	1087	154	602	144

ಆ) ನಿಗಮದ ವಿವಿಧ ಯೋಜನೆಗಳಡಿ ಸಾಲ ಪಡೆಯಲು ಈ ಕೆಳಕಂಡ ಅರ್ಹತೆಗಳನ್ನು ಅರ್ಜಿದಾರರು ಹೊಂದಿರಬೇಕು

(1) ಸ್ವಯಂ ಉದ್ಯೋಗ ಯೋಜನೆ

1 ಅರ್ಜಿದಾರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು

2 ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ರೂ 22,000/- ಮೀರಿರಬಾರದು

3 ರಾಷ್ಟ್ರೀಕೃತ ಬ್ಯಾಂಕ್, ಷೆಡ್ಯೂಲ್ ಬ್ಯಾಂಕ್ ಹಾಗೂ ಗ್ರಾಮೀಣ ಬ್ಯಾಂಕ್ ಗಳಿಗೆ ಮಾತ್ರ ಸಾಲದ ಅರ್ಜಿಗಳನ್ನು ಶಿಫಾರಸ್ಸು ಮಾಡಲಾಗುವುದು

4 ಬ್ಯಾಂಕ್‌ಗಳಿಂದ ಸಾಲ ಮಂಜೂರಾಗಿ ಸಹಾಯಧನ ಬಿಡುಗಡೆ ಮಾಡಲು ಬಂದ ಪ್ರಸ್ತಾವನೆಗಳನ್ನು ದಿನಾಂಕವಾರು ವಿಂಗಡಿಸಿ ಮೊದಲು ಬಂದ

ಪ್ರಸ್ತಾವನೆಗಳಿಗೆ ಮೊದಲ ಆದ್ಯತೆ ಮೇಲೆ ಸಹಾಯಧನ ಬಿಡುಗಡೆ ಮಾಡಲಾಗುವುದು

5 ವ್ಯಾಪಾರ ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡದೆ, ಸ್ಥಿರ ಸ್ವತ್ತುಗಳನ್ನು ಸೃಷ್ಟಿಸುವ ಉದ್ದೇಶಗಳಿಗೆ ಮಾತ್ರ ಸಹಾಯ ಒದಗಿಸುವುದು

6 ಸಹಾಯಧನ ಬ್ಯಾಂಕಿಗೆ ಕಳುಹಿಸಿದ 60 ದಿನದೊಳಗಾಗಿ ಸಾಲ ಮತ್ತು ಸಹಾಯಧನ ಫಲಾನುಭವಿಗಳಿಗೆ ಬಿಡುಗಡೆಯಾಗುವಂತೆ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ 60 ದಿನದೊಳಗಾಗಿ ಸಹಾಯಧನ ಬಿಡುಗಡೆಯಾಗದೇ ಇದ್ದಲ್ಲಿ ಅಂತಹ ಬ್ಯಾಂಕುಗಳ ನಿಯಂತ್ರಣಾಧಿಕಾರಿಗಳಿಗೆ ದೂರು ಸಲ್ಲಿಸಲಾಗುವುದು ಹಾಗೂ ಬಿ ಎಲ್ ಬಿ ಸಿ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಜಿಲ್ಲಾ ಮಟ್ಟದಲ್ಲಿ ನಡೆಯುವ ಬ್ಯಾಂಕರ್ಸ್ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಗಮನಕ್ಕೆ ತಂದು ಚರ್ಚಿಸಲಾಗುವುದು ಬ್ಯಾಂಕ್‌ಗಳಿಂದ ಸಹಾಯಧನ ಬಿಡುಗಡೆ ಮಾಡಿದ ಬಗ್ಗೆ ಉಪಯೋಗ ವರದಿ ನಿಗದಿತ ನಮೂನೆಯಲ್ಲಿ ಪಡೆದುಕೊಳ್ಳಲಾಗುವುದು ತಪ್ಪಿದಲ್ಲಿ ಆ ಮೊತ್ತವನ್ನು ಹಿಂದಕ್ಕೆ ಪಡೆಯಲಾಗುವುದು.

7 60 ದಿನಗಳು ಮೀರಿ ಸಹಾಯಧನ ಬ್ಯಾಂಕುಗಳಲ್ಲಿ ಇದ್ದು ನಂತರ ಹಿಂತಿರುಗಿಸಿದಲ್ಲಿ ಬಡ್ಡಿ ಸಮೇತ ಹಿಂತಿರುಗಿಸಲು ಬ್ಯಾಂಕ್‌ಗಳಿಗೆ ತಿಳಿಸಲಾಗುವುದು ಹಾಗೂ ಅಂತಹ ಪ್ರಕರಣಗಳ ಬಗ್ಗೆ ರಾಜ್ಯ ಮಟ್ಟದಲ್ಲಿ ಬ್ಯಾಂಕರುಗಳ ಸಮಿತಿಗೆ ಮಂಡಿಸಲಾಗುವುದು

8 ನಿಗಮದಿಂದ ಶಿಫಾರಸ್ಸು ಆದ ಅರ್ಜಿಗಳಿಗೆ ಮಾತ್ರ ಸಹಾಯಧನ ಬಿಡುಗಡೆ ಮಾಡಲಾಗುವುದು

9 ಯೋಜನಾ ವೆಚ್ಚ ರೂ 50,000/– ಒಳಗೆ ಇರುವ ಘಟಕಗಳಿಗೆ ಮಾತ್ರ ಸಹಾಯಧನ ಪಡೆಯಲು ಅರ್ಹತೆ ಇರುತ್ತದೆ ಯೋಜನಾ ವೆಚ್ಚದ ಶೇ 50 ರಷ್ಟು ಗರಿಷ್ಟ ರೂ 10,000/– ಸಹಾಯಧನ ಮಂಜೂರು ಮಾಡಲಾಗುವುದು

(2) ಉದ್ಯಮ ಶೀಲತಾ/ನೇರಸಾಲ ಯೋಜನೆ

1 ಅರ್ಜಿದಾರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು

2 ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ 40,000/– ಮತ್ತು ನಗರ ಪ್ರದೇಶದಲ್ಲಿ ರೂ 55,000/– ಮೀರಿರಬಾರದು

3 ಕಳೆದ 15 ವರ್ಷದಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು

4 ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು

5 ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು

6 ಅರ್ಜಿದಾರರು ಸೌಲಭ್ಯ ಪಡೆಯಲಿಚ್ಚಿಸುವ ಉದ್ದೇಶ ಕಸುಬುಗಳಲ್ಲಿ ಸಾಕಷ್ಟು ಜ್ಞಾನ ಮತ್ತು ಅನುಭವ ಹೊಂದಿದವರಾಗಿರಬೇಕು

7 ಅರ್ಜಿದಾರರು 18 ವರ್ಷದಿಂದ 60 ವರ್ಷದ ವಯೋ ಮಾನದವರಾಗಿರಬೇಕು

8 ವಾಹನವಾಗಿದ್ದಲ್ಲಿ ಸಂಬಂಧಪಟ್ಟ ವಾಹನ ಚಾಲನ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರಬೇಕು

(3) ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ

1 ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದ್ದು, ಸಮಿಕ್ಷಾ ಪಟ್ಟಿಯಲ್ಲಿ ಇರುವ ಕುಟುದಂಬದ ಎಲ್ಲಾ ಅರ್ಹ ಸದಸ್ಯರುಗಳಿಗೆ ಸಾಲ ಸೌಲಭ್ಯ ಪಡೆಯಲು ಅರ್ಹತೆ ಇರುತ್ತದೆ

2 ಈಗಾಗಲೇ ಸಾಲ ಪಡೆದವರಿಗೆ ಎರಡನೇ ಬಾರಿ ಸಾಲ ಪಡೆಯಲು ಅರ್ಹತೆ ಇರುವುದಿಲ್ಲ

3 ಸಮೀಕ್ಷೆ ಕಾರ್ಯವನ್ನು ನಗರಾಭಿವೃದ್ಧಿ ಇಲಾಖೆಯಿಂದ ಮಾಡಲಾಗುತ್ತದೆ

ಇ) ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 2003 ರಿಂದ 2007ರವರೆಗೆ ಈ ಕೆಳಕಂಡಂತೆ ವಾಹನಗಳನ್ನು ಹಂಚಿಕೆ ಮಾಡಲಾಗಿದೆ

ವಾಹನಗಳ ಮಾದರಿ	2003–04		2004–05		2005–06		2006–07	
	ಪ ಜಾ	ಪ ವ	ಪ ಜಾ	ಪ ವ	ಪ ಜಾ	ಪ ವ	ಪ ಜಾ	ಪ ವ
ಟೆಂಪೋ ಟ್ರಾವಲರ್	01	–	–	–	–	–	–	–
ಆಟೋ ರಿಕ್ಷಾ	14	–	07	01	17	02	11	–
ಟೆಂಪೋ ಎಕ್ಸೆಲ್	–	–	01	–	–	–	–	–
ಟಾಟಾ ಇಂಡಿಕಾ	–	–	02	–	–	–	1	–
ಟಯೋಟಾ ಕ್ವಾಲೀಸ್	–	–	01	–	–	–	–	–
ಒಟ್ಟು	15	–	11	01	17	02	12	–

ಈ) ಇಲಾಖೆಯ ಮರ್ಜಿ ಕೋಟ ಇರುವುದಿಲ್ಲ ಇದರನ್ವಯ ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ